# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 50 ಜಿಪಸ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 18.04.2013

## ಸುತ್ತೋಲೆ

ವಿಷಯ: ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (ಬಿಆರ್‌ಜಿಎಫ್) ಯೋಜನೆಯ ಅನುಷ್ಠಾನದ ಬಗ್ಗೆ.

---

ಕೇಂದ್ರ ಸರ್ಕಾರವು ರಾಷ್ಟ್ರೀಯ ಸಮ ವಿಕಾಸ ಯೋಜನೆಯನ್ನು ಮಾರ್ಪಡಿಸಿ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ರೂಪದಲ್ಲಿ ರಾಜ್ಯದ 6 ಜಿಲ್ಲೆಗಳಲ್ಲಿ ಅಂದರೆ, ಬೀದರ, ಗುಲ್ಬರ್ಗಾ, ಚಿತ್ರದುರ್ಗ, ದಾವಣಗೆರೆ, ರಾಯಚೂರು ಮತ್ತು ಯಾದಗಿರಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಯೋಜನೆಯು ಎರಡು ಭಾಗಗಳನ್ನು ಒಳಗೊಂಡಿರುತ್ತದೆ.

(1) ಜನರ ಸಹಭಾಗಿತ್ವದಲ್ಲಿ ಅಭಿವೃದ್ಧಿ ಯೋಜನೆಗಳ ತಯಾರಿ ಹಾಗು ಅನುಷ್ಠಾನ.
(2) ಸಾಮರ್ಥ್ಯಾಭಿವೃದ್ಧಿ

ರಾಜ್ಯದಲ್ಲಿ ಈ ಯೋಜನೆಯು ಪ್ರಥಮವಾಗಿ 2006–07ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದೆ. ತದನಂತರದ ವರ್ಷಗಳಲ್ಲಿ ಉಳಿದ ಐದು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಕೇಂದ್ರ ಸರ್ಕಾರವು ಬಿ.ಆರ್.ಜಿ.ಎಫ್. ಅನುಷ್ಠಾನದ ಬಗ್ಗೆ ಈಗಾಗಲೇ ಯೋಜನಾ ಮಾರ್ಗಸೂಚಿಯನ್ನು ಹೊರಡಿಸಿದ್ದು, ಅದರಂತೆ ಜಿಲ್ಲೆಗಳಿಗೆ ಬಿಡುಗಡೆಯಾಗುವ ಅನುದಾನವು ಮುಕ್ತನಿಧಿಯಾಗಿರುತ್ತದೆ. ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾ ಯೋಜನೆಗಳನ್ನು ರೂಪಿಸಿದ ನಂತರ ಯೋಜನೆಗಳಲ್ಲಿ ಕಂಡುಬರುವ ಅಂತರಗಳನ್ನು (gaps) ಕಡಿಮೆ ಮಾಡಲು ಹಾಗು ಹಿಂದುಳಿಯುವಿಕೆಯಿಂದ ಈ ಜಿಲ್ಲೆಗಳನ್ನು ಸಂಪೂರ್ಣವಾಗಿ ಮೇಲೆತ್ತಲು ಅಗತ್ಯ ಕ್ರಮ ಕೈಗೊಳ್ಳಲು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (ಬಿಆರ್‌ಜಿಎಫ್) ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಈ ಕೆಳಕಂಡ ಹೆಚ್ಚುವರಿ ಮಾರ್ಗಸೂಚಿಯನ್ನು ಅನುಸರಿಸುವಂತೆ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (ಬಿಆರ್‌ಜಿಎಫ್) ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

1. ಪಂಚಾಯತ್ ರಾಜ್ ಸಂಸ್ಥೆಗಳು ಹಾಗು ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಷಿಕ ಅನುದಾನದಲ್ಲಿ ಶೇ.80 ಹಾಗು ಶೇ.20ರ ಅನುಪಾತದಲ್ಲಿ ಹಂಚಿಕೆ ಮಾಡುವುದು.
2. ಪಂ.ರಾಜ್ ಸಂಸ್ಥೆಗಳಿಗೆ ನಿಗದಿಪಡಿಸಿರುವ ಅನುದಾನದಲ್ಲಿ ಗ್ರಾಮ ಪಂಚಾಯತಿಗಳಿಗೆ ಶೇ.70 ರಷ್ಟು, ತಾಲ್ಲೂಕು ಪಂಚಾಯತಿಗೆ ಶೇ.20 ರಷ್ಟು ಹಾಗು ಜಿಲ್ಲಾ ಪಂಚಾಯತಿಗಳಿಗೆ ಶೇ.10 ರಷ್ಟು ನಿಗದಿಪಡಿಸಿ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಅನುಷ್ಠಾನಗೊಳಿಸುವುದು.
3. 2013–14 ಹಾಗು ತದನಂತರದ ವರ್ಷಗಳ ಸಮಗ್ರ ಜಿಲ್ಲಾ ಯೋಜನೆ(District Plan), ಗ್ರಾಮ ಸಭೆಗಳ ಮೂಲಕ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತ್ತಿಗಳ ಕ್ರೋಢಿಕೃತ ಅಭಿವೃದ್ಧಿ ಯೋಜನೆಯಾಗಿರಬೇಕು.

4. 2013–14ನೇ ಸಾಲಿನ ಜಿಲ್ಲಾ ಯೋಜನೆ(District Plan)ಯನ್ನು ತಯಾರಿಸುವಾಗ ಪಂ.ರಾಜ್ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ 24 ಇಲಾಖೆಗಳ ಕೇಂದ್ರ ಪುರಸ್ಕೃತ ಯೋಜನೆ, ಕೇಂದ್ರ ಅನುದಾನಗಳು, ರಾಜ್ಯ ಪುರಸ್ಕೃತ ಯೋಜನೆಗಳು, ಅನುದಾನಗಳು, ಜಿಲ್ಲಾ ವಲಯದ ಯೋಜನೆಗಳು, ಯೋಜನೆ ಹಾಗು ಯೋಜನೇತರ ಕಾರ್ಯಕ್ರಮಗಳು, ಬಾಹ್ಯ ನೆರವಿನ ಯೋಜನೆಗಳು ಹಾಗು ಅನಿರ್ಬಂಧಿತ ಅನುದಾನಗಳನ್ನು ಸಮ್ಮಿಳನಗೊಳಿಸಿ ರಚಿಸಬೇಕಾಗಿರುತ್ತದೆ. ಈ ರೀತಿ ತಯಾರಿಸಲಾಗಿರುವ ಜಿಲ್ಲಾ ಯೋಜನೆ(District Plan) ದಾಖಲೆಯಾದ ಮೇಲೆ ಬಿಆರ್‌ಜಿಎಫ್‌ನ 2013–14ರ ಕ್ರಿಯಾ ಯೋಜನೆಯನ್ನು ತಯಾರಿಸಬೇಕು. ಬಿ.ಆರ್.ಜಿ.ಎಫ್. ಅನುದಾನವನ್ನು gap filling ಗಾಗಿ ಉಪಯೋಗಿಸುವುದು. ಇದನ್ನು ಕಡ್ಡಾಯವಾಗಿ ತಯಾರಿಸುವುದು ಹಾಗೂ ಪ್ಲಾನ್–ಪ್ಲಸ್(Plan Plus) ತಂತ್ರಾಂಶದಲ್ಲಿ ಅಪಲೋಡ್ ಮಾಡುವುದು.
5. ಜಿಲ್ಲಾ ಯೋಜನೆ 2013–14 ಹಾಗೂ ಅದರ ಆಧಾರದ ಮೇಲೆ ಬಿಆರ್‌ಜಿಎಫ್ Action Plan 2013–14 ಯೋಜನೆಯನ್ನು ತಯಾರಿಸಲು ಎಸ್.ಐ.ಆರ್.ಡಿ ಸಂಸ್ಥೆಯವರು Base Line Survey ಹಾಗೂ Perspective Plan ಮಾಡಿದ್ದಲ್ಲಿ ಅದನ್ನು ಸಹ ಪರಿಗಣಿಸುವುದು. ಈ ಕಾರ್ಯಕ್ಕೆ ಎಸ್.ಐ.ಆರ್.ಡಿ ಸಂಸ್ಥೆಯವರು ಪ್ರತಿ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸಹಾಯ ಮಾಡಲು ನಿರ್ದೇಶಕರು, ಎಸ್.ಐ.ಆರ್.ಡಿ ಹಾಗೂ ಅವರ ತಂಡದ ಅಧಿಕಾರಿಗಳು ಮುಂದಿನ 10 ದಿನಗಳಲ್ಲಿ ನಿಯೋಜಿಸುವುದು. 2013–14 ನೇ ಸಾಲಿನ ಬಿಆರ್‌ಜಿಎಫ್ (BRGF) Action Plan ಹಾಗೂ ಜಿಲ್ಲಾ ಯೋಜನೆ(District Plan) ನ್ನು ಮೇ 31ರೊಳಗಾಗಿ ಸರ್ಕಾರಕ್ಕೆ ಸಲ್ಲಿಸುವುದು.
6. ಬಿ.ಆರ್.ಜಿ.ಎಫ್. ಯೋಜನೆಯಡಿಯಲ್ಲಿ gap filling ಮಾಡುವ ಸಲುವಾಗಿ ಮಾತ್ರ ಅನುದಾನವನ್ನು ಉಪಯೋಗಿಸತಕ್ಕದ್ದು. ಈ ಜಿಲ್ಲೆಗಳ ಹಿಂದುಳುಯುವಿಕೆಯ ಮಾನದಂಡದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಲು ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಹಾಗೂ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಶೇ.90 ರಷ್ಟು ಅನುದಾನವನ್ನು ದೀರ್ಘ ಕಾಲದ ಬಾಳಿಕೆ(Permanent Asset Creation) ಬರುವಂತಹ ಮೂಲಭೂತ ಸೌಕರ್ಯ ನಿರ್ಮಿಸಲು ಹಾಗು ಶೇ.10 ರಷ್ಟನ್ನು ಇತರೆ ಕಾರ್ಯಕ್ರಮಗಳಿಗೆ ಉಪಯೋಗಿಸುವುದು.
7. ಜಿಲ್ಲೆಯ ಬಿಆರ್‌ಜಿಎಫ್ ಅನುದಾನದ ಯಾವುದೇ ತರಬೇತಿ ಕಾರ್ಯಕ್ರಮಗಳನ್ನು- ಅಥವಾ ಮಾನ್ಯತೆ ಭೇಟಿಗಳಾಗಲಿ (Exposure Visits), ಎಸ್.ಐ.ಆರ್.ಡಿ ಮುಖಾಂತರವಾಗಲಿ, ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರವಾಗಲಿ ಅಥವಾ ಪಂಚಾಯತ ರಾಜ್ ಸಂಸ್ಥೆಗಳ ಮುಖಾಂತರವಾಗಲಿ ಹಮ್ಮಿಕೊಳ್ಳಲು ಅನುದಾನವನ್ನು ಕಾಯ್ದಿರಿಸಬಾರದು. ಕಾರಣ ಸಾಮರ್ಥ್ಯವರ್ಧನೆ(Capacity Building) ತರಬೇತಿಗಾಗಿ ಎಸ್.ಐ.ಆರ್.ಡಿಗೆ ಕೇಂದ್ರ ಸರ್ಕಾರದಿಂದ ಪ್ರತ್ಯೇಕ ಅನುದಾನ ಬಿಡುಗಡೆಯಾಗುತ್ತದೆ.
8. ಪ್ಲಾನ್–ಪ್ಲಸ್(Plan Plus) ಹಾಗು ಆಕ್ಷನ್ ಸಾಫ್ಟ್ (Action Soft)ತಂತ್ರಾಂಶದಲ್ಲಿ 2013–14ನೇ ಸಾಲಿನ ಕ್ರಿಯಾಯೋಜನೆ ಹಾಗೂ ಪ್ರಗತಿ ವರದಿಯನ್ನು ಈ ಹಿಂದಿನ ಸಾಲಿನ ಅನುದಾನವನ್ನು ಒಳಗೊಂಡಂತೆ ಕೂಡಲೇ ಅಳವಡಿಸುವುದು.
9. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಿಪಿಎಂಯು ವಿಭಾಗದ ವತಿಯಿಂದ ಮುಂದಿನ 10 ದಿನಗಳಲ್ಲಿ ಈ ಜಿಲ್ಲೆಯ ಅಧಿಕಾರಿಗಳಿಗೆ ಪ್ಲಾನ್–ಪ್ಲಸ್ (Plan Plus) ಹಾಗು ಆಕ್ಷನ್ ಸಾಫ್ಟ್ (Action Soft)ತಂತ್ರಾಂಶದ ಬಗ್ಗೆ ಎಲ್ಲಾ ಪಿಡಿಓ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ Refresher ತರಬೇತಿ ನೀಡುವುದು.
10. ಯೋಜನಾ ಜಿಲ್ಲೆಗಳಲ್ಲಿ ಕನಿಷ್ಠ 2 ತಿಂಗಳಿಗೊಮ್ಮೆ ಜಿಲ್ಲಾ ಯೋಜನಾ ಸಮಿತಿ(DPC)ಯ ಸಭೆಗಳನ್ನು ನಡೆಸಬೇಕು ಹಾಗು ಅಭಿವೃದ್ಧಿ ಯೋಜನೆಯ ಸಭೆ ಹಾಗು ಬಿಆರ್‌ಜಿಎಫ್ ಪ್ರಗತಿ ಪರಿಶೀಲನೆ ನಡೆಸುವುದು.
11. ಬಿ.ಆರ್.ಜಿ.ಎಫ್. ಯೋಜನೆಯ ಪ್ರಗತಿಯನ್ನು ಜಿಲ್ಲೆಯಲ್ಲಿ ನಡೆಯುವ ಜಿಲ್ಲಾ ಅಭಿವೃದ್ಧಿ ಯೋಜನೆಯ ಪ್ರಗತಿ ಪರಿಶೀಲನೆ ಸಭೆ(KDP Meeting) ಹಾಗು ಪಂ.ರಾಜ್ ಸಂಸ್ಥೆಗಳ ಹಾಗು

ನಗರ ಸ್ಥಳೀಯ ಸಂಸ್ಥೆಗಳ ಪ್ರತಿ ತಿಂಗಳ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪ್ರಗತಿ ವರದಿಯನ್ನು ನಮೂದಿಸಿ ಅದರ ಬಗ್ಗೆ ಪರಿಶೀಲನೆ ಮಾಡುವುದು.

12. ಬಿ.ಆರ್.ಜಿ.ಎಫ್. ಯೋಜನೆಯ ಅನುಷ್ಠಾನವನ್ನು ಪ್ರತಿ ವರ್ಷ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಜಮಾಬಂಧಿಯಲ್ಲಿ ಗ್ರಾಮ ಪಂಚಾಯತಿ ಯೋಜನೆ, ತಾಲ್ಲೂಕು ಪಂಚಾಯತಿ ಯೋಜನೆ ಹಾಗು ಜಿಲ್ಲಾ ಪಂಚಾಯತಿ ಯೋಜನೆಯನ್ನು ಕಡ್ಡಾಯವಾಗಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವುದು.

13. ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಶೇ.20ರ ಅನುದಾನದಲ್ಲಿ ಜಿಲ್ಲೆಯಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ನಿಗದಿಪಡಿಸುವುದು..

14. ಜಿಲ್ಲಾ ಅಭಿವೃದ್ಧಿ ಯೋಜನೆಯಲ್ಲಿ ಈ ಸ್ಥಳೀಯ ಸಂಸ್ಥೆಗಳ ವಾರ್ಷಿಕ ಅಭಿವೃದ್ಧಿ ಯೋಜನೆಗಳು ಸಹ ಒಂದು ಅಂಗವಾಗಿರಬೇಕು.

15. ಬಿ.ಆರ್.ಜಿ.ಎಫ್. ಯೋಜನೆಯ ಅನುಷ್ಠಾನದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಆಗುವುದರಿಂದ ಕಡ್ಡಾಯವಾಗಿ ಜಿಲ್ಲಾಧಿಕಾರಿಗಳು DPC ಸಭೆಗಳಲ್ಲಿ ಭಾಗವಹಿಸಬೇಕು.. ಜಿಲ್ಲಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿ ಪ್ರತಿ ಪ್ರತಿ ಮಾಹೆ ಯೋಜನೆ ಅನುಷ್ಠಾನದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೆರವು ನೀಡುವುದು.

16. ಈ ಯೋಜನೆಯ ಜಿಲ್ಲೆಗಳಲ್ಲಿ ಸಾಮರ್ಥ್ಯಾಭಿವೃದ್ಧಿಗೆ ಎ.ಎನ್.ಎಸ್.ಎಸ್.ಐ.ಆರ್.ಡಿ. ಸಂಸ್ಥೆಯು ನೋಡಲ್ ಸಂಸ್ಥೆಯಾಗಿದ್ದು, ಯಾವ ರೀತಿಯ ತರಬೇತಿಗಳು ಜಿಲ್ಲೆಗೆ ಅವಶ್ಯಕತೆ ಇದೆ ಎನ್ನುವ ಬಗ್ಗೆ ಪ್ರತಿ ಜಿಲ್ಲೆಯಲ್ಲಿ 24 ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಭೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಯೋಜಿಸತಕ್ಕದ್ದು. ಈ ಸಭೆಯಲ್ಲಿ ಹೊರಹೊಮ್ಮುವ ಅಂಶಗಳನ್ನು ಪೂರಕವಾಗಿ ಪರಿಗಣಿಸಿ ಜಿಲ್ಲಾವಾರು ವಾರ್ಷಿಕ ತರಬೇತಿಯನ್ನು ಎಸ್.ಐ.ಆರ್.ಡಿ. ಸಂಸ್ಥೆಯವರು ಹಮ್ಮಿಕೊಳ್ಳುವುದು. ಈ ಕಾರ್ಯಕ್ರಮವು ಮಾರ್ಚ್ 2013ರ ಅಂತ್ಯದಲ್ಲಿಯೇ ಪೂರ್ಣಗೊಂಡು 2013-14ನೇ ಸಾಲಿನಲ್ಲಿ ನೀಡುವ ತರಬೇತಿಯ ವೇಳಾಪಟ್ಟಿ ಹಾಗು ಪ್ರಕ್ರಿಯೆಯನ್ನು ಅಂತಿಮಗೊಳಿಸಿ ಅನುಷ್ಠಾನಗೊಳಿಸುವಂತೆ ಸೂಚಿಸಿದೆ.

17. ಮೇಲೆ ವಿವರಿಸಿರುವ ಅನುಷ್ಠಾನದ ನಿಯಮಗಳನ್ನು ಪಾಲಿಸುವ ಜವಾಬ್ದಾರಿಯನ್ನು ಆಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಹಿಸಿದೆ.

ಹೊರಡಿಸಿದೆ 18/4
ದಿನಾಂಕ......
ಗ್ರಾ.ಅ.ಪಂ

18/04/13

(ಪಿ.ಕುಮಾರ್)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

18/04/13

ಇವರಿಗೆ:

1. ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ (ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ), ಲಲಿತ ಮಹಲ್ ರಸ್ತೆ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಬೀದರ, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು. 6
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಚಿತ್ರದುರ್ಗ ಮತ್ತು ದಾವಣಗೆರೆ. 6
4. ನಿರ್ದೇಶಕರು, ಪಿಪಿಎಂಯು, ಗ್ರಾ.ಅ&ಪಂ.ರಾಜ್ ಇಲಾಖೆ.
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ&ಪಂ.ರಾಜ್ ಇಲಾಖೆ.
6. ವೆಬ್ ಸೈಟ್, ಕರ್ನಾಟಕ ವಿಕಾಸ

20/04/13

ಪ್ರತಿ:

1. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ/ಯೋಜನಾ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
2. ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಶಾಖೆ, ಗ್ರಾ.ಅ&ಪಂ.ರಾಜ್ ಇಲಾಖೆ.